ಹೋಗಿ ಮುಂದುವರೆಯದಂತೆ ಅವರನ್ನು ಕರೆದು ಬುದ್ಧಿ ಹೇಳಿದ್ದರು. ಇಲ್ಲದ ತಾಪತ್ರಯವನ್ನು ಮೈಮೇಲೆ ಎಳೆದುಕೊಳ್ಳುವುದೇಕೆಂದು ಮುಮ್ತಾಜಳ ಅಪ್ಪ ಮಗಳನ್ನು ಕಾಲೇಜು ಬಿಡಿಸಿ ಬೇರೆ ಊರಿನಲ್ಲಿರುವ ಸಹೋದರನ ಮನೆಗೆ ಸಾಗಹಾಕಿದ್ದರು. ಮೈಲಾರಪ್ಪ ಗಡ್ಡಬಿಟ್ಟು ಕೆಲವು ದಿನ ವಿರಹತಾಪದಿಂದ ಬಳಲಿದರೂ ಅವರೊಳಗಿನ ವೈಚಾರಿಕ ಕ್ರಾಂತಿ ಮತ್ತೆ ಅವರನ್ನು ಕಾರ್ಲ್ ಮಾರ್ಕ್ಸ್, ಲೆನಿನ್ ವಿಚಾರಧಾರೆಗಳತ್ತ ಮುಖಮಾಡಿ ನಿಲ್ಲಿಸಿತ್ತು.

ಮೈಲಾರಪ್ಪ ಈಗ ಪ್ರೊಫೆಸರ್ ಹುದ್ದೆಗೆ ಬಡ್ತಿಹೊಂದಿ ಅದೇ ಎಸ್.ಬಿ. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವರೆಂದು ಮತ್ತು ಕ್ರಾಂತಿ, ಹೋರಾಟಗಳನ್ನು ಬಿಟ್ಟು ಆಯಕಟ್ಟಿನ ಹುದ್ದೆಗಳ ವಾಸನಾಕಾಂಕ್ಷಿಯಾಗಿರುವರೆಂದು ಆಗಾಗ ಅವರ ಹಳೆಯ ವಿದ್ಯಾರ್ಥಿಗಳ ಮಾತಿನ ನಡುವೆ ಈ ವಿಷಯ ಚರ್ಚೆಗೆ ಬರುತ್ತಿತ್ತು. ತಾವು ಕೆಲಸಕ್ಕೆ ಸೇರಿದ ಆ ಆರಂಭದ ದಿನಗಳಲ್ಲಿ ಬೇರೆ ಧರ್ಮದ ವಿದ್ಯಾರ್ಥಿನಿಯನ್ನು ಪ್ರೀತಿಸಿ ಮದುವೆ ಮಾಡಿಕೊಳ್ಳಲು ಮುಂದಾಗಿದ್ದ ಮೈಲಾರಪ್ಪನವರು ಮುಂದೊಂದು ದಿನ ತಮ್ಮ ಮಗಳಿಂದ ಇತಿಹಾಸ ಪುನರಾವರ್ತನೆಯಾದಾಗ ಉರಿದೆದ್ದು ಅವಳನ್ನು ಉನ್ನತ ವ್ಯಾಸಂಗಕ್ಕೆಂದು ವಿದೇಶಕ್ಕೆ ಕಳುಹಿಸಿ ಇಡೀ ಪ್ರಕರಣವನ್ನು ಮುಚ್ಚಿಹಾಕಿದ್ದು ಅವರ ವಿದ್ಯಾರ್ಥಿಗಳು ವರ್ಣರಂಜಿತವಾಗಿ ಬಣ್ಣಿಸುತ್ತ ಪ್ರೊಫೆಸರರ ಗೋಸುಂಬೆತನವನ್ನು ಆಡಿಕೊಂಡು ನಗುತ್ತಿದ್ದರು.

ಪ್ರೊಫೆಸರ್ ಮೈಲಾರಪ್ಪನವರ ಮನದ ವಾಸನೆಯಿಂದ ಅವರು ವಿಶ್ವವಿದ್ಯಾಲಯದ ಆಯಕಟ್ಟಿನ ಜಾಗವೊಂದಕ್ಕೆ ತೀವ್ರವಾಗಿ ಲಾಬಿ ಮಾಡುತ್ತಿರಬಹುದೆಂದು ಚಿದಂಬರ ಗ್ರಹಿಸಿದ. ಕಾಕತಾಳೀಯ ಎನ್ನುವಂತೆ ಮುಂದಿನ ಕೆಲವೇ ತಿಂಗಳುಗಳಲ್ಲಿ ಮೈಲಾರಪ್ಪ ವೈಸ್‌ಚಾನ್ಸಲರ್ ಹುದ್ದೆಗೆ ನಿಯುಕ್ತಿಗೊಂಡು ಚಿದಂಬರನ ಊಹೆ ನಿಜವಾಯಿತು. ಹೊಸ ವೈಸ್‌ಚಾನ್ಸಲರ್‌ರನ್ನು ಸನ್ಮಾನಿಸುವ ದಿನ ಕೊರಳಿಗೆ ಹೂವಿನ ಹಾರ ಹಾಕಿ ಹತ್ತಿರ ನಿಂತು ತನ್ನ ಮೂಗಿನ ಹೊಳ್ಳೆಗಳನ್ನು ಅಗಲಗೊಳಿಸಿ ಆಘ್ರಾಣಿಸಿದವನಿಗೆ ಈಗ ಒಂದಕ್ಕಿಂತ ಹೆಚ್ಚಿನ ವಾಸನೆಗಳು ಮೂಗಿಗೆ ಬಡಿದು ದಿಗ್ಮೂಢನಾದ. ಪ್ರೊಫೆಸರ್ ಮೈಲಾರಪ್ಪನವರ ಮುಖದಲ್ಲಿ ಯಾವ ಕ್ರಾಂತಿಯ ಕಿಡಿ ಗೋಚರಿಸದೆ ಅವರ ಮನಸಿನಲ್ಲಿ ಹುತ್ತುಗಟ್ಟಿದ ಕಾಮನೆಗಳ ವಾಸನೆ ಅವನನ್ನು ದಿಗ್ಭ್ರಮೆಗೊಳಿಸಿತು.

* * *

'ಅಲ್ಲಯ್ಯ ಚಿದಂಬರ, ನಿನ್ನ ಮೂಸಿದರೆ ಯಾವ ವಾಸನೆನೂ ಬರತಿಲ್ಲವಲ್ಲಯ್ಯ. ಹೆಣ್ಣು, ಹೊನ್ನು, ಮಣ್ಣಿನ ವಾಸನೆ ನಿನ್ನ ಶರೀರದಲ್ಲೇ ಇಲ್ಲ. ಈ ನೀತಿ, ನ್ಯಾಯ, ಧರ್ಮ ಅಂತ ನಂಬಿಕೊಂಡು ಎಷ್ಟು ದಿವಸ ಅಂತ ಬದಕ್ತಿಯಾ. ದೇವರು ಕೊಟ್ಟ ಆಯುಷ್ಯದಲ್ಲಿ ಎಲ್ಲ ಅನುಭವಿಸಿ ಸಾಯಬೇಕು. ಮತ್ತೆ ಮತ್ತೆ ಹುಟ್ಟಿ ಬರಲಿಕ್ಕೆ ಮಾನವ ಜನ್ಮ ಏನು ಹುಲ್ಲು ಬೀಜ ಅಲ್ಲ. ನನ್ನನ್ನು ನೋಡು ಬದುಕನ್ನು ಹೇಗೆ ಪರಿಪೂರ್ಣವಾಗಿ ಬದುಕಿದ್ದೀನಿ ಅಂತ ಅರ್ಥ ಆಗುತ್ತೆ. ನಿಮ್ಮಂಥವರು ನೀವೂ ಸುಖವಾಗಿ ಬದುಕಲ್ಲ. ನಿಮ್ಮ ನಂಬಿದ ಹೆಂಡತಿ ಮಕ್ಕಳನ್ನೂ ಸುಖವಾಗಿ ಬದುಕಿಸಲ್ಲ. ಯಾಕೆ ದಂಡಕ್ಕೆ ಮನುಷ್ಯನಾಗಿ ಹುಟ್ಟಿದ್ದಿಯೋ ನನಗಂತೂ ಇವತ್ತಿಗೂ ಅರ್ಥ ಆಗ್ತಿಲ್ಲ. ನನಗಷ್ಟೆ ಅಲ್ಲ ಆಫೀಸಿನಲ್ಲಿರುವ ಪ್ರತಿಯೊಬ್ಬರಿಗೂ ಈ ಭೂಮಿಯ ಮೇಲೆ ಅರ್ಥವಾಗದೇ ಉಳಿದಿರುವ ಏಕೈಕ ಪಳಿಯುಳಿಕೆ ಅಂದರೆ ಅದು ನೀನೇ ನೋಡು' ಕ್ಯಾಂಟಿನ್‌ಗೆ ಚಹಾ ಕುಡಿಯಲೆಂದು ಆಹ್ವಾನಿಸಿದ್ದಕ್ಕೆ ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ ಕುಳಿತಿದ್ದ ಚಿದಂಬರನನ್ನು ನೋಡಿದ್ದೆ ಶೇಷಗಿರಿ ಪುರೋಹಿತ ತರಾಟೆ ತೆಗೆದುಕೊಂಡಿದ್ದ.

ಶೇಷಗಿರಿ ಪುರೋಹಿತ ಮತ್ತು ಚಿದಂಬರ ಕಳೆದ ಇಪ್ಪತ್ತು ವರ್ಷಗಳಿಂದ ವಿಶ್ವವಿದ್ಯಾಲಯದ ಆಡಳಿತ ಭವನದ ಕಚೇರಿಯಲ್ಲಿ ಕೂಡಿಯೇ ಕೆಲಸ ಮಾಡುತ್ತಿದ್ದರು. ಹಾಗೆಂದು ಇಬ್ಬರ ನಡುವೆ ಹೇಳಿಕೊಳ್ಳುವಂತಹ ಸ್ನೇಹವೇನಿರಲಿಲ್ಲ. ಶೇಷಗಿರಿ ಪುರೋಹಿತ ಸಂದರ್ಭಕ್ಕೆ ತಕ್ಕಂತೆ ಬದಲಾಗುವ ಗುಣಧರ್ಮವನ್ನು ಮೈಗೂಡಿಸಿಕೊಂಡು ಕಾಲಕಾಲಕ್ಕೆ ಬಂದ ಮೇಲಧಿಕಾರಿಗಳ ಕೃಪೆಗೆ ಪಾತ್ರನಾಗಿದ್ದ. ತನ್ನದೆ ಸಮುದಾಯದ ಪ್ರೊಫೆಸರ್ ಶಂಕರಾನಂದರು ವೈಸ್‌ಚಾನ್ಸಲರ್ ಆಗಿದ್ದಾಗ ಭ್ರೂಮಧ್ಯದಲ್ಲಿ ಮಂತ್ರಾಕ್ಷತೆ ಸಹಿತ ಉದ್ದನೆಯ ತಿಲಕ, ಹಣೆಯ ಎಡ ಬಲದಲ್ಲಿ ಗಂಧದಿಂದ ರೂಪುಗೊಂಡ ಶಂಖ ಮತ್ತು